ವಿಜಯವಾಣಿ

ಕನ್ನಡಿಗರ ಧ್ವನಿ

# ಬಾಸ್ಕೆಟ್‌ಬಾಲ್: ಎಸ್‌ಬಿಎಂ ಜೈನ್ ಕಾಲೇಜಿಗೆ ಪ್ರಶಸ್ತಿ

**ಬೆಂಗಳೂರು:** ಎಸ್‌ಬಿಎಂ ಜೈನ್ ಕಾಲೇಜು ಪುರುಷರ ಹಾಗೂ ಮಹಿಳೆಯರ ತಂಡಗಳು ಬಿಎಫ್‌ಐ ಐಎಂಜಿ ರಿಲಯನ್ಸ್ ರಾಜ್ಯ ಕಾಲೇಜು ಬಾಸ್ಕೆಟ್‌ಬಾಲ್ ಲೀಗ್‌ನಲ್ಲಿ ಟ್ರೋಫಿ ಜಯಿಸಿವೆ. ಸಿಂಧಿ ಕಾಲೇಜು ಒಳಾಂಗಣ ಕೋರ್ಟ್‌ನಲ್ಲಿ ಮಂಗಳವಾರ ನಡೆದ ಪುರುಷರ ಫೈನಲ್ ಪಂದ್ಯದಲ್ಲಿ ಎಸ್‌ಬಿಎಂ ಜೈನ್ ಕಾಲೇಜು ತಂಡ 81-61ರಿಂದ ಸುರಾನ ಕಾಲೇಜು ವಿರುದ್ಧ ಜಯ ದಾಖಲಿಸಿತು. ವಿಜಯಿ ತಂಡದ ಪರ ವಿಶು 26, ಕೈಫ್ 22 ಅಂಕ ಗಳಿಸಿದರು. ಇನ್ನು ಮಹಿಳೆಯರ ಫೈನಲ್ ಪಂದ್ಯದಲ್ಲಿ ಎಸ್‌ಬಿಎಂ ಜೈನ್ ಕಾಲೇಜು ತಂಡ 49-39ರಿಂದ ಸೇಂಟ್ ಜೋಸೆಫ್ ವಾಣಿಜ್ಯ ಕಾಲೇಜು ತಂಡವನ್ನು ಮಣಿಸಿತು. ಸಿಮೊನೆಲ್ಲೆ ಹಾಗೂ ಅಮೃತಾ ಮಾನಿ ತಲಾ 15 ಅಂಕಗಳಿಸಿದರು.



ಚಾಂಪಿಯನ್ ಎಸ್‌ಬಿಎಂ ಜೈನ್ ಕಾಲೇಜು ಮಹಿಳೆಯರ ತಂಡ.